ಬೇಗ ಆಧುನೀಕರಣ ಮಾಡುವ ದಿಕ್ಕಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆನ್ನುವ ಮಾತನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ : ಮಾನ್ಯ ಅಧ್ಯಕ್ಷರೆ, 4 ಕೋಟಿ 76 ಲಕ್ಷ ಮತ್ತು 5 ಕೋಟಿ 1 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅದು ಯಾವುದಕ್ಕೂ ಸಾಲುವುದಿಲ್ಲ. ಇಟ್ಟಿರುವಂಥ ಹಣ ಬಹಳಷ್ಟು ಕಡಿಮೆ ಇದೆ. ಏಕೆಂದರೆ, ಆ ಕಾಲುವೆಗಳು 300–350 ವರ್ಷಗಳಷ್ಟು ಹಳೆಯದಾಗಿರುವುದರಿಂದ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ಆದಷ್ಟು ಬೇಗ ಜಾಗ್ರತೆಯಾಗಿ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆಗಲಿ ಅಧ್ಯಕ್ಷರೆ,

ಹಾರಂಗಿ ಡಿವಿಜನಲ್ ಕಛೇರಿಯನ್ನು ಸಾಲಿಗ್ರಾಮಕ್ಕೆ ಸ್ಥಳಾಂತರಿಸಿರುವುದು

231 (1313) : ಶ್ರೀ ಎಂ. ಮಹದೇವ (ಕೃಷ್ಣರಾಜನಗರ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾರಂಗಿ ನಾಲಾ ವಿಭಾಗ (ಡಿವಿಜನ್) ಕಛೇರಿಯನ್ನು ಕೆ.ಆರ್.ನಗರದಿಂದ ಸಾಲಿಗ್ರಾಮಕ್ಕೆ ಸ್ಥಳಾಂತರಿಸಿರುವುದು ನಿಜವೇ ;

ಆ) ಸ್ಥಳಾಂತರಿಸಲು ಕಾರಣವೇನು ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) –

ಅ) ಇಲ್ಲ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಮಹದೇವ: ಮಾನ್ಯ ಅಧ್ಯಕ್ಷರೆ, ಸರ್ಕಾರ ನೀಡಿದ ಉತ್ತರ ಕೂಡ ಸರಿಯಾಗಿದೆ. 'ಇಲ್ಲ' ಎಂದು ಹೇಳಿದ್ದಾರೆ. ಇಲಾಖೆಯಲ್ಲಿ ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿರಬಹುದು. ಆದರೆ, ಈಗಿರುವ ಹಾರಂಗಿ division ನಮ್ಮ ತಾಲ್ಲೂಕು head quarters ಆದಂಥ ಕೆ.ಆರ್. ನಗರದಲ್ಲಿದೆ. ಆದರೆ ಅಲ್ಲಿ ರಾಜಕೀಯ ವಲಯಗಳಲ್ಲಿ ಒಂದು ದೊಡ್ಡ ಸುದ್ದಿ ಏನೆಂದರೆ, ಪ್ರಭಾವಿ ರಾಜಕಾರಣಿಗಳು ಸಾಲಿಗ್ರಾಮಕ್ಕೆ ಬದಲಾಯಿಸುತ್ತಾರೆಂದು ಸಾಕಷ್ಟು ಸಾರ್ವಜನಿಕರ ಗಮನಕ್ಕೆ ಬಂದು, ಆ ವಿಚಾರದಲ್ಲಿ ಸಾಕಷ್ಟು ಚರ್ಚೆಗಳು ಕೂಡ ಆಗುತ್ತಿವೆ. ಹಾಗಾಗಿ ಸರ್ಕಾರ ಮುಂದೆಯೂ ಕೂಡ ಇದಕ್ಕೆ ಬದ್ಧವಾಗಿರುತ್ತದೆಯೇ ಎಂದು ನಾನು ಮಾನ್ಯ ಸಚಿವರಿಂದ ಉತ್ತರವನ್ನು ಅಪೇಕ್ಷೆ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಕೇಳಿರುವ ಪ್ರಶ್ನೆಗೆ ತುಂಬ ಸ್ಪಷ್ಟವಾಗಿ ಉತ್ತರ ಕೊಡಲಾಗಿದೆ. ಹಾರಂಗಿ ನಾಲಾ ವಿಭಾಗ ಕಛೇರಿಯನ್ನು ಕೆ.ಆರ್. ನಗರದಿಂದ ಸಾಲಿಗ್ರಾಮಕ್ಕೆ ಸ್ಥಳಾಂತರಿಸುವುದು ನಿಜವೇ? ಎಂದು ಕೇಳಿದ್ದಾರೆ. 'ಇಲ್ಲ' ಎಂದು ಹೇಳಿದ್ದೇನೆ. ಸ್ಥಳಾಂತರಿಸಲು ಕಾರಣವೇನು? ಎಂದು ಕೇಳಿದ್ದಕ್ಕೆ 'ಉದ್ಭವಿಸುವುದಿಲ್ಲ' ಎಂದು ಉತ್ತರದಲ್ಲಿ ಹೇಳಿದ್ದೇನೆ. ಇದನ್ನು ತುಂಬ ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ, ಪ್ರಭಾವಿ ರಾಜಕಾರಣಿಗಳ ಮಧ್ಯೆ ಮಾನ್ಯ ಮಹದೇವರವರು ಕೂಡ ಬರುತ್ತಾರೆ. ಅದರಲ್ಲೇನೂ ಅನುಮಾನವಿಲ್ಲ. ನಾನು ತುಂಬ ಸ್ಪಷ್ಟವಾಗಿ ಇವತ್ತು ಉತ್ತರ ಕೊಟ್ಟಿದ್ದೇನೆ, ಸದ್ಯಕ್ಕೆ ಇದನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವ ಪ್ರಶ್ನೆ ಇಲ್ಲ.

ಶ್ರೀ ಎಂ. ಮಹದೇವ: ಸಧ್ಯಕ್ಕೆ ಇಲ್ಲ ಎಂದು ಹೇಳಿದಿರಿ. ಮುಂದೆ?

ಶ್ರೀ ಕೆ.ಎಸ್. ಈಶ್ವರಪ್ಪ: ಮುಂದೆ ಪ್ರಪಂಚದಲ್ಲಿ ಏನೇನು ಆಗುತ್ತದೋ ನೋಡೋಣ. ಈವಾಗ ಅಂತೂ ಇಲ್ಲ.

ಶ್ರೀ ಎಂ. ಮಹದೇವ: ನಿಮ್ಮ ಅವಧಿಯಲ್ಲಿ ಇಲ್ಲವೇ?

ಸಾಗರ ತಾಲ್ಲೂಕಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆಯಾಗದಿರುವುದು

232 (1309) : ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಗರ ತಾಲ್ಲೂಕಿನ ನಕ್ಸಲ್ ಪ್ರದೇಶವಾದ ತುಂಬ್ರ ಮತ್ತು ಕೈಕೊಡ್ ಪ್ರದೇಶದಲ್ಲಿ ಹತ್ತು ಸಾವಿರ ಜನಸಂಖ್ಯೆ ಇದ್ದರೂ, ಇದುವರೆವಿಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇದುವರೆವಿಗೂ ಕಾಲೇಜು ಸ್ಥಾಪಿಸದಿರಲು ಕಾರಣಗಳೇನು ಹಾಗೂ ಯಾವಾಗ ಸ್ಥಾಪಿಸಲಾಗುವುದು ;

ಇ) ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) –

ಅ) ಹೌದು